## 3. ಸ.ಕಿ.ಪ್ರಾ. ಶಾಲೆ, ಮುಂಡಿಗೇಸರ, ಕೆಳದಿ ಕೇಂದ್ರ ಸಾಗರ ತಾ,

ನಲಿ ಕಲಿ ತರಗತಿಗಳು 1 ರಿಂದ 3 ನೇ ತರಗತಿವರೆಗೆ ಕನ್ನಡ, ಗಣಿತ, ಪರಿಸರ ಅಧ್ಯಯನ ವಿಷಯಗಳನ್ನು ಒಳಗೊಂಡಿದ್ದು, ಮಕ್ಕಳು ಸ್ವ – ಕಲಿಕೆ, ಸ್ವ – ವೇಗದ ಕಲಿಕೆ, ಸಂತಸದಾಯಕ ಕಲಿಕೆ ಎಂಬ ತತ್ವವನ್ನು ಅಳವಡಿಸಿಕೊಂಡಿದ್ದು, ಮಕ್ಕಳು ಯಾವುದೇ ಆತಂಕವಿಲ್ಲದೆ ಕಲಿಕೆಯಲ್ಲಿ ತೊಡಗಿಕೊಂಡಿದ್ದಾರೆ. ಸದಾ ಚಟುವಟಿಕೆಯಿಂದ ಎಲ್ಲಾ ಮಕ್ಕಳು ಶಿಕ್ಷಕರ ಸಹಾಯ ಮತ್ತು ಸಹಪಾಠಿಗಳ ಸಹಾಯ ಸಹಕಾರದಿಂದ ಚಟುವಟಿಕೆಗಳನ್ನು ಮಾಡುತ್ತಾ ಕಲಿಯುತ್ತಾರೆ. ಇದಕ್ಕೆ ನಮ್ಮ ಶಾಲೆಯ ಮಕ್ಕಳು ಲವಲವಿಕೆಯಿಂದ ತೊಡಗಿಸಿಕೊಂಡಿರುವುದು ಕಂಡು ಬರುತ್ತದೆ.

**ಭೌತಿಕ ಪರಿಸರ :–** ನಮ್ಮ ಶಾಲೆಯಲ್ಲಿ ಸಕಲ ಸೌಲಭ್ಯಗಳನ್ನು ಹೊಂದಿದ್ದು, ಆಟ ಪಾಠಗಳಿಗೆ ಬೇಕಾದ ಪರಿಕರಗಳನ್ನು ಚೆನ್ನಾಗಿ ಉಪಯೋಗಿಸಿಕೊಳ್ಳುತ್ತಾರೆ. ಇದರಿಂದ ಅವರ ಮಾನಸಿಕ ಹಾಗೂ ದೈಹಿಕ ಬೆಳವಣಿಗೆಗೆ ಉತ್ತಮವಾಗಿದೆ. ನಲಿ ಕಲಿ ತರಗತಿಗೆ ಬೇಕಾದ ಸಾಮಗ್ರಿಗಳನ್ನು ತರಗತಿವಾರು, ವಿಷಯಂವಾರು, ಮೈಲಿಗಲ್ಲುವಾರು ಜೋಡಿಸಿಕೊಂಡಿದ್ದೇವೆ. ಕನ್ನಡದ ಹಳೆಯ ವಾಚಕಗಳನ್ನು ಹಸು ಕಾರ್ಡುಗಳನ್ನು ಜಾರು ಚಪ್ಪಟ್ಟಿಗಳನ್ನು ಮಕ್ಕಳು ಬಳಕೆ ಮಾಡುವಂತೆ ವ್ಯವಸ್ಥಿತವಾಗಿ ಜೋಡಿಸಲಾಗಿದೆ. ಕಲಿಕಾ ಚಪ್ಪರದಲ್ಲಿ ಮಕ್ಕಳು ತಯಾರಿಸಿದ ಕ್ರಾಫ್ಟ್ ಚಟುವಟಿಕೆಗಳನ್ನು ಕಡಿಮೆ ಖರ್ಚಿನಲ್ಲಿ ತಯಾರಿಸಿ ಸುಂದರವಾಗಿ ಕಾಣುವಂತೆ ಮಕ್ಕಳೇ ನೇತುಹಾಕಿದ್ದಾರೆ. ಇದರಿಂದ ಅವರಲ್ಲಿ ಆತ್ಮವಿಶ್ವಾಸ ಮತ್ತು ತಾನೂ ಮಾಡಬಲ್ಲೆ ಎಂಬ ಭಾವನೆಯ ಜೊತೆಗೆ ಕಲಿಕೆಯುಂಟುಮಾಡಿದೆ. ವಾಲ್‌ಪ್ಲೇಟ್‌ನಲ್ಲಿ ಮಕ್ಕಳು ಬರವಣಿಗೆ ಮಾಡಲು ಯೋಗ್ಯವಾಗಿರುವಂತೆ ತಯಾರಿಸಿದ್ದು, ಪ್ರತಿ ಮಗುವಿಗೂ ಜಾಗ ಗುರುತುಮಾಡಲಾಗಿದೆ. ಅದೇ ಅವರ ಆಸ್ತಿ ಎಂಬಂತೆ ಮಕ್ಕಳು ತಾ ಮುಂದು ನಾ ಮುಂದು ಎಂದು ಬರೆಯುತ್ತಾ ಇರುತ್ತಾರೆ. ಇದರಿಂದ ಕಲಿಕೆಯ ದೃಢತೆ ಉಂಟಾಗಿದೆ. ನಮ್ಮ ಶಾಲೆಯಲ್ಲಿ ಮಕ್ಕಳು ಕುಳಿತುಕೊಳ್ಳುವ ಗುಂಪುತಟ್ಟೆಗಳನ್ನು ಬೆಂಚು ಮತ್ತು ಸ್ಟೂಲ್‌ಗಳ ವ್ಯವಸ್ಥೆ ಮಾಡಲಾಗಿದೆ. ಇದರಿಂದ ಮಕ್ಕಳ ಬಟ್ಟೆ ಸ್ವಚ್ಚವಾಗಿರುತ್ತದೆ. ವೈಜ್ಞಾನಿಕವಾಗಿ ನೇರವಾಗಿ ಕುಳಿತು ಓದು, ಬರಹ ಮಾಡಲು ಸಹಕಾರಿಯಾಗಿದೆ. ಮಲೆನಾಡಿನಲ್ಲಿ ಹೆಚ್ಚು ಮಳೆ ಬೀಳುವ ಕಾರಣ ತಂಡಿ ಅಂಶ ಹೆಚ್ಚು, ಇದನ್ನು ಗಮನಿಸಿ ಗ್ರಾಮ ಪಂಚಾಯ್ತಿ ಮತ್ತು ಸಮುಧಾಯದವರ ಸಹಕಾರದಿಂದ ವ್ಯವಸ್ಥೆ ಮಾಡಲಾಗಿದೆ. ಟ್ರೇ ವ್ಯವಸ್ಥೆ, ಪ್ರತಿ ಮಗುವಿಗೊಂದು ಟ್ರೇ ವ್ಯವಸ್ಥೆ ಮಾಡಿದ್ದು, ಅವುಗಳಲ್ಲಿ ತಮ್ಮ ತಮ್ಮ ಅಭ್ಯಾಸ ಪುಸ್ತಕ ಯೋಜನೆಗಳು, ಲೇಖನಿ ಸಾಮಗ್ರಿಗಳು, ನೋಟ್ ಪುಸ್ತಕಗಳನ್ನು ಇಟ್ಟುಕೊಳ್ಳಲು ಅನುಕೂಲವಾಗಿದೆ. ಇದರಿಂದ ಮಕ್ಕಳ ಬ್ಯಾಗ್‌ನ ಹೊರೆ ಕಡಿಮೆಯಾಗುವುದು ಸತ್ಯ. ಪರಿಸರ ಅಧ್ಯಯನ ಕಲಿಕೆಯನ್ನು ನಮ್ಮ ಮಕ್ಕಳು ಉದ್ಯಾನವನ ಮತ್ತು ಕುಟೀರಗಳಲ್ಲಿ ಕಲಿಯುತ್ತಾರೆ. ತರಕಾರಿ ಬೆಳೆಸುವುದು, ಮಧ್ಯಾಹ್ನ ಬಿಸಿ ಊಟಕ್ಕೆ ಬಳಕೆಮಾಡುವುದು ಇದೆಲ್ಲವನ್ನೂ ಮಕ್ಕಳು ಅನುಭವದ ಮೂಲಕ ಕಲಿಯುತ್ತಾರೆ. ಕುಟೀರದಲ್ಲಿ ಚರ್ಚೆ ಆಶುಭಾಷಣ, ಮಣ್ಣಿನ ಮಾದರಿಗಳು ಹೊರಾಂಗಣ, ಒಳಾಂಗಣ ಆಟಗಳನ್ನು ನಿಗದಿಪಡಿಸಿದ ಚಟುವಟಿಕೆಗಳನ್ನು ಇಲ್ಲಿಯೇ ನಿರ್ವಹಿಸುತ್ತಾರೆ. ಕುಟೀರವೆಂದರೆ ಮಕ್ಕಳಿಗೆ ಅಚ್ಚು ಮೆಚ್ಚು.

**ನಲಿ–ಕಲಿ ಪ್ರಕಿಯೆ :–** ನಮ್ಮ ಶಾಲೆಯ ಮಕ್ಕಳು ನಲಿ–ಕಲಿ ತರಗತಿ ಕೋಣೆಗೆ ಸಂತಸದಿಂದ ಆಗಮಿಸುತ್ತಾರೆ. ಹವಾಮಾನ ನಕ್ಷೆ ಗುರುತಿಸುವುದು, ನಲಿಕಲಿ ಚಪ್ಪಾಳೆ, ನಲಿ ಕಲಿ ಗೀತೆ, ಸಾಮೂಹಿಕ ಚಟುವಟಿಕೆಯೊಂದಿಗೆ ತರಗತಿ ಪ್ರಾರಂಭವಾಗಿ ಪ್ರಗತಿ ನೋಟ ಗಮನಿಸಿ ತಮ್ಮ ಮೆಟ್ಟಿಲನ್ನು ಆಯ್ಕೆ ಮಾಡಿಕೊಂಡು ತಾವು ಚಟುವಟಿಕೆ ನಿರ್ವಹಿಸಬೇಕಾದ ಕಲಿಕಾ ಗುಂಪಿನಲ್ಲಿ ಕುಳಿತುಕೊಳ್ಳುವರು. ಈ ಮಧ್ಯ ನಾಯಕನಾದವನು ಗುಂಪು ತಟ್ಟೆಗಳನ್ನು ಜೋಡಿಸುವನು. ಶಿಕ್ಷಕರಾದ ನಾವು 2ನೇ ಗುಂಪು ತಟ್ಟೆಯಲ್ಲಿ (ಕನ್ನಡ.ಪ.ಅ.) ಮಕ್ಕಳಿಗೆ ಆಧ್ಯತೆಯ ಆಧಾರದಮೇಲೆ ಕಲಿಕಾಂಶವನ್ನು ಕಲಿಸುತ್ತೇವೆ. 5 ನೇ ಗುಂಪಿನಿಂದ ಸಲಹೆ ನೀಡುತ್ತಾ ಈ ಕಾರ್ಯಕ್ಕೆ ಮುಂದುವರಿಯುತ್ತೇವೆ. ತಮಗೆ ಬೇಕಾದ ಕಲಿಕಾ ಸಾಮಗ್ರಿಗಳನ್ನು ಸ್ವತಃ ತಾವೇ ತೆಗೆದುಕೊಳ್ಳುತ್ತಾರೆ. ಇದರಿಂದ ಮಕ್ಕಳಲ್ಲಿ ಶಿಸ್ತು, ನಾಯಕತ್ವದ ಗುಣ ಬೆಳೆಯುತ್ತದೆ. ಚಟುವಟಿಕೆ ಪೂರೈಸಿದ ವಿದ್ಯಾರ್ಥಿಗಳ ಕಲಿಕಾ ದೃಢೀಕರಣ ಪಡೆದು ಮುಂದಿನ ಚಟುವಟಿಕೆಗೆ ಹೋಗುತ್ತಾರೆ. ಹೀಗೆ ಪ್ರತಿ ಮಗುವಿಗೂ ನಿರಂತರ ಮೌಲ್ಯ ಮಾಪನ ನಡೆಯುತ್ತಿರುತ್ತದೆ. ಕೊನೆಗೆ ಶಿಕ್ಷಕರ ಡೈರಿಯಲ್ಲಿ ನಮೂದಿಸಿಕೊಳ್ಳುತ್ತೇವೆ. ನಿರಂತರ ಮತ್ತು ವ್ಯಾಪಕ ಮೌಲ್ಯ ಮಾಪನ ಎಂಬುದು (ಸಿ.ಸಿ.ಇ) ನಲಿ ಕಲಿಯಲ್ಲಿ ಹಾಸು ಹೊಕ್ಕಾಗಿದೆ. ಇದರಿಂದ (ಎನ್.ಸಿ.ಇ.ಆರ್.ಟಿ.ಯ) ಆಶಯವನ್ನು ಸಂಪೂರ್ಣ ಈಡೇರಿಸಿದಂತಾಗಿದೆ. ಇಲ್ಲಿ ಶಿಕ್ಷಕರು ಮತ್ತು ಮಕ್ಕಳು ನಿರಾಸಕ್ತಿ ತೋರಲು ಅವಕಾಶವೇ ಇಲ್ಲ. ಸದಾ ಚಟುವಟಿಕೆಯಿಂದ ಕೂಡಿರುವಂತೆ ಮಾಡುತ್ತದೆ.

**ಮಕ್ಕಳ ಪ್ರಗತಿ :–** ಮಕ್ಕಳು ಸಹಾ ಚಟುವಟಿಕೆಯಿಂದ ಕೂಡಿರುವುದರಿಂದ ಅವರ ಶೈಕ್ಷಣಿಕ, ದೈಹಿಕ, ಪ್ರಗತಿ ಸಾಧ್ಯವಾಗಿದೆ. ಓದು, ಬರಹ, ಸರಳ ಲೆಕ್ಕಾಚಾರದಲ್ಲಿ ಮಕ್ಕಳು ಉತ್ತಮ ಸಾಧನೆ ಮಾಡುತ್ತಿದ್ದಾರೆ. ಪ್ರಸ್ತುತ 5 ನೇ ತರಗತಿಯಲ್ಲಿ ಲೋಕೇಶ ಎಂ. ಎಂಬ ವಿದ್ಯಾರ್ಥಿಯು ಕಲಿಕೆಯ ನಿಧಾನಗತಿಯ ಮಗುವಾಗಿದ್ದು, ಕಣ್ಣಿನ & ಕಿವಿಯ ದಇಂಂಷಂವಿರುವ ಮಗುವಾಗಿದ್ದರೂ ಓದು, ಸರಳಲೆಕ್ಕಾಚಾರ ಕಲಿಕೆಯಲ್ಲಿ ಯಶಸ್ವಿಯಾಗಿದ್ದಾನೆ. ಇದಕ್ಕೆ ಕಾರಣ ನಲಿಕಲಿಯ ಸ್ವ ವೇಗದ ಕಲಿಕೆ, ಸಂತಸದಾಯಕ ಕಲಿಕೆಯಾಗಿದೆ. ನಮ್ಮ ಶಾಲೆಯಲ್ಲಿ ಪ್ರಸ್ತುತ (2018–19 )ಸಾಲಿನಲ್ಲಿ ಒಟ್ಟು 25 ವಿದ್ಯಾರ್ಥಿಗಳು(1 ರಿಂದ 5) ವಿದ್ಯಾಭ್ಯಾಸ ಮಾಡುತ್ತಿದ್ದು, ನಲಿಕಲಿಯಲ್ಲಿ 15 ಮಕ್ಕಳು ಕಲಿಕೆಯಲ್ಲಿ ತೊಡಗಿಸಿಕೊಂಡಿದ್ದಾರೆ. 3 ನೇ ತರಗತಿಯ 2 ಮಕ್ಕಳು ನಿಧಾನಗತಿ ಕಲಿಕೆಯ ಮಕ್ಕಳನ್ನು ಹೊರತುಪಡಿಸಿ ಎಲ್ಲಾ ಮಕ್ಕಳೂ ಉತ್ತಮ ಕಲಿಕೆಯಲ್ಲಿದ್ದಾರೆ. ಮಕ್ಕಳ ದಾಖಲಾತಿ ಹಾಜರಾತಿ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಾ ಹೋಗಿದೆ. ನಮ್ಮ ಶಾಲೆಯಲ್ಲಿ ಎಲ್ಲಾ ವರ್ಗದ ಮಕ್ಕಳೂ ವಿದ್ಯಾಭ್ಯಾಸ ಮಾಡುತ್ತಿದ್ದು, ಸ್ವತಃ ಶಿಕ್ಷಕರ ಮಕ್ಕಳೂ ಇದೇ ಶಾಲೆಯಲ್ಲಿ ಓದುತ್ತಿರುವುದು ಇತರ ಪೋಷಕರಿಗೆ ಪ್ರೇರಣೆಯಾಗಿದೆ. ಖಾಸಗಿ ಶಾಲೆಗೆ ಹೋಗುವಂತಹ ಮಕ್ಕಳನ್ನೂ ನಮ್ಮೂರ ಶಾಲೆಗೆ ಸೇರಿಸಿರುವುದು. ಶ್ಲಾಘನೀಯ ವಿಚಾರವಾಗಿದೆ. 5 ವರ್ಷಗಳ ಹಿಂದೆ 4 ಮಕ್ಕಳು ಮಾತ್ರ ಇದ್ದು ಶಾಲೆಯನ್ನು ಮುಚ್ಚುವಂತೆ ಇಲಾಖೆಯ ಆದೇಶವಿತ್ತು. ಆದರೆ ಇಂದು ಸುಂದರವಾದ ಪರಿಸರದೊಂದಿಗೆ ಪ್ರಗತಿಯ ಹಾದಿಯಲ್ಲಿದೆ. 2017–18 ನೇ ಸಾಲಿನಲ್ಲಿ ಪರಿಸರ ಅಧ್ಯಯನ ಕೇಂದ್ರದಿಂದ ಕೊಡುವ ಪ್ರಶಸ್ತಿಯಲ್ಲಿ "ಹಳದಿ ಶಾಲೆ" ಪ್ರಶಸ್ತಿಗೆ ಭಾಜನರಾಗಿದ್ದೇವೆ. ಪ್ರತಿವರ್ಷವು ಪ್ರತಿಭಾ ಕಾರಂಜಿಯಲ್ಲಿ ಕಲಿಕೋತ್ಸವದಲ್ಲಿ ಭಾಗವಹಿಸಿ ಉತ್ತಮ ಪ್ರದರ್ಶನ ನೀಡಿ ಪ್ರಶಸ್ತಿಗಳನ್ನು ಪಡೆದುಕೊಳ್ಳಲಾಗಿದೆ. ಹೊರಸಂಚಾರ ವಾರ್ಷಿಕೋತ್ಸವ ದಂತಹ ಪಠ್ಯೇತರ ಚಟುವಟಿಕೆಗಳಲ್ಲೂ ಎಲ್ಲಾ ಮಕ್ಕಳೂ ಭಾಗವಹಿಸುವಂತೆ ಅವಕಾಶ ನೀಡಲಾಗಿದೆ. ಇದರಿಂದ ಮಕ್ಕಳಲ್ಲಿ ಸಭಾ ಕಂಪನವನ್ನು ಹೋಗಲಾಡಿಸಿ ಧೈರ್ಯ ತುಂಬುವ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಪ್ರತಿ ವರ್ಷವು ದಾಖಲಾತಿ ಅಂದೋಲನವನ್ನು ಮಾಡಿ ಏಪ್ರಿಲ್ ಮೇ ತಿಂಗಳಲ್ಲಿಯೇ ಮಕ್ಕಳ ಮನೆಗಳಿಗೆ ಭೇಟಿ ನೀಡಿ ಪ್ರೇರೇಪಿಸಲಾಗಿದೆ.

**ಶಿಕ್ಷಕರ ಅಭಿಪ್ರಾಯ :–** ಶಾಲೆಯಲ್ಲಿ ನಲಿ – ಕಲಿ ತರಗತಿಯನ್ನು ನಿರ್ವಹಿಸಲು ಮಕ್ಕಳ ಪೋಷಕರ, ಇಲಾಖೆಯ ಸಹಕಾರ ಬಹಳ ಮುಖ್ಯ .ಮಕ್ಕಳಲ್ಲಿ ನಿಧಾನಗತಿ ಕಲಿಕೆಯ ಮಕ್ಕಳು ಮತ್ತು ವೇಗದ ಕಲಿಕಾ ಮಕ್ಕಳು ನಮಗೆ ಸವಾಲಾಗಿ ಕಂಡು ಬರುತ್ತಾರೆ. ಅಂತವರನ್ನು ಜಾಣ್ಮೆಯಿಂದ ನಿಭಾಯಿಸುತ್ತಾ ಕಲಿಕೆಯಲ್ಲಿ ತೊಡಗಿಸಿಕೊಂಡಿದ್ದೇವೆ. ಇಂತಹ ಮಕ್ಕಳನ್ನು ನಿರ್ಲಕ್ಷ ಮಾಡದೆ ಅವರಿಗೆ ಹೆಚ್ಚು ಒತ್ತು ಕೊಟ್ಟು ಬಿಡುವಿನ ಅವಧಿಯಲ್ಲಿ ವಿಷಯ ಚಟುವಟಿಕೆಗಳ ಮೂಲಕ ಕಲಿಕೆಯನ್ನುಂಟು ಮಾಡಲಾಗಿದೆ. ಕನ್ನಡ, ಗಣಿತ, ಪರಿಸರ ಅಧ್ಯಯನ ವಿಷಯಗಳಂತೆ ಇಂಗ್ಲೀಷ್ ವಿಷಯವನ್ನು ನಾವು ನಲಿ ಕಲಿಯ ಸಾಮಗ್ರಿಗಳನ್ನು ಚಟುವಟಿಕೆಗಳನ್ನು ಗಳನ್ನು ಅಳವಡಿಸಿಕೊಂಡು ಉತ್ತಮವಾಗಿ ಕಲಿಸುತ್ತಿದ್ದೇವೆ. ಆದರೆ ಇಂಗ್ಲೀಷ್ ಆಕ್ಟಿವಿಟಿ ಕಾರ್ಡ್‌ಗಳನ್ನು ಒದಗಿಸಿದರೆ ಇನ್ನೂ ನಲಿಕಲಿಯನ್ನು ಉತ್ತಮಗೊಳಿಸಬಹುದು ಎಂಬುದು ನಮ್ಮ ಅಭಿಪ್ರಾಯ.

**ಸಮುದಾಯದ ಸಹಭಾಗಿತ್ವ :–** ನಮ್ಮ ಶಾಲೆಗೆ ಬೇಕಾದ ಭೌತಿಕ ವ್ಯವಸ್ಥೆಯನ್ನು ಚೆನ್ನಾಗಿ ನಮ್ಮ ಶಾಲೆಯ ಪೋಷಕರು ಮಾಡಿಕೊಟ್ಟಿರುತ್ತಾರೆ. ಪ್ರತಿವರ್ಷವು 2 ದಿನ ಶ್ರಮದಾನದ ಮೂಲಕ ಶಾಲೆಯ ಆವರಣ ಸ್ವಚ್ಚತೆ, ತಂತಿ ಬೇಲಿ ನಿರ್ಮಿಸುವುದು, ಗಿಡಗಳನ್ನು ನೆಡುವುದು, ಕುಟೀರ ನಿರ್ಮಾಣ ಕಾರ್ಯಕ್ರಮ ನಿರ್ವಹಿಸಲು ನೈಸರ್ಗಿಕ ಸ್ಟೇಜ್ (ವೇದಿಕೆ) ನಿರ್ಮಾಣ, ಕೈತೋಟ ನಿರ್ಮಾಣದಂತಹ ಕೆಲಸಗಳನ್ನು ಮನಃ ಪೂರ್ವಕವಾಗಿ ನಿರ್ವಹಿಸಿದ್ದಾರೆ. ಸರ್ಕಾರಿ ಶಾಲೆ ಎನ್ನುವುದಕ್ಕಿಂತ ನಮ್ಮೂರ ಶಾಲೆ ಎಂಬ ಭಾವನೆಯಿಂದ ಸಹಕರಿಸುತ್ತಿದ್ದಾರೆ. ನಲಿ ಕಲಿ ಬಗ್ಗೆ ಮೊದಲು ತಾತ್ಸಾರಭಾವನೆ ತೋರುತ್ತಿದ್ದವರು ಮಕ್ಕಳ ಕಲಿಕೆಯನ್ನು ಗಮನಿಸಿ ಯಾವ ಖಾಸಗಿ ಶಾಲೆಗೂ ಕಡಿಮೆ ಇಲ್ಲ ನಮ್ಮ ಶಾಲೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಪೋಷಕರಲ್ಲಿ ಇರುವ ಆಚಾರಿ ಮೇಸ್ತ್ರಿಗಳನ್ನು ನಮ್ಮ ಶಾಲೆಯ ಕೆಲಸಕ್ಕೆ ಸಹಕರಿಸುವಂತೆ ಪ್ರೋತ್ಸಾಹಿಸಿ ಉಚಿತ ಸೇವೆಯನ್ನು ಪಡೆಯಲಾಗಿದೆ. ನಮ್ಮೂರಲ್ಲೇ ಇರುವ ಗೃಹ ಕೈಗಾರಿಕೆಗಳಾದ ಕರ್ಪೂರ ತಯಾರಿಕೆ, ಅಡಿಕೆ ಹಾಳೆಯಿಂದ ತಟ್ಟೆ ಬಟ್ಟಲು ತಯಾರಿಕೆ, ಜೇನು ಕೃಷಿಯಂತಹ ಚಟುವಟಿಕೆಗಳನ್ನು ನಮ್ಮ ಮಕ್ಕಳು ಸ್ವಂತಃ ವೀಕ್ಷಿಸಿ ಅನುಭವದ ಮೂಲಕ ಕಲಿಯುವಂತೆ ಸಮುದಾಯದ ಸದ್ಬಳಕೆ ಮಾಡಿಕೊಳ್ಳಲಾಗಿದೆ. ನಮ್ಮ ಶಾಲೆಯ ಮಕ್ಕಳಿಗೆ ಉಚಿತ ಸಮವಸ್ತ್ರ (2014–15) ಗ್ರಂಥಾಲಯದ ಪುಸ್ತಕಗಳು, ಗ್ರಂಥಾಲಯದ ಅಲ್ಮೆರಾಗಳನ್ನು ಹಳೆಯ ವಿದ್ಯಾರ್ಥಿಗಳಿಂದ ಕೊಡುಗೆಯಾಗಿ ಪಡೆದಿದೆ.

**ಇಲಾಖೆಯ ಮಾರ್ಗದರ್ಶನ :–** ನಮ್ಮ ಶಾಲೆ ಮತ್ತು ಮಕ್ಕಳ ಪ್ರಗತಿ ಸಾಧಿಸಲು ನಲಿ ಕಲಿಯ ತರಬೇತಿ ಯನ್ನು ಪುನಶ್ಚೇತನ ತರಬೇತಿಯನ್ನು ಆಗಾಗ ಇಲಾಖೆಯು ನಮಗೆ ನೀಡುತ್ತಿರುವುದರಿಂದ ಸಾಧ್ಯವಾಗಿದೆ. ನಲಿಕಲಿಯಲ್ಲಿರುವ ಗೊಂದಲಗಳನ್ನು ಇಲಾಖೆಯ ಸಿ.ಆರ್.ಪಿ. ಮತ್ತು ಬಿ.ಆರ್.ಸಿ. & ಬಿ.ಇ.ಓ. ಮತ್ತು ಡಯಟ್ ನ ಹಿರಿಯ ಉಪನ್ಯಾಸಕರು

ನಮ್ಮ ಶಾಲೆಗೆ ಭೇಟಿ ನೀಡಿ ಮಾರ್ಗದರ್ಶನ ನೀಡುತ್ತಾ ಬಂದಿದ್ದಾರೆ. ನಲಿಕಲಿಯಲ್ಲಿ ಆಗಬೇಕಾದ ಬದಲಾವಣೆಗಳನ್ನು ಆಗಾಗ ತಿದ್ದಿ ರೂಪಿಸುವಲ್ಲಿ ಯಶಸ್ವಿಯಾಗಿದೆ. ಇಲಾಖೆಯ ನಿರ್ದೇಶನದಂತೆ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಸದಾ ನಮ್ಮ ಶಾಲೆ ಶ್ರಮಿಸುತ್ತಿದೆ. ಒಟ್ಟಾರೆ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಯನ್ನು ಸಾಧಿಸಲು ಶಾಲೆಯ ವಾತಾವರಣ ಮತ್ತು ತೊಡಗಿಸಿಕೊಳ್ಳುವಿಕೆ ಬಹಳ ಮುಖ್ಯವಾಗಿರುತ್ತದೆ. ನಲಿಕಲಿಯಲ್ಲಿ ಮಕ್ಕಳು ಚಟುವಟಿಕೆಗಳನ್ನು ಮಾಡುತ್ತಾ ಕಲಿಯುವುದರಿಂದ ಕಲಿಕೆಯಲ್ಲಿ ಆಸಕ್ತಿ ಹೆಚ್ಚಿಸುತ್ತದೆ. ಇದರಿಂದ ಯಾವ ಮಕ್ಕಳೂ ಶಿಕ್ಷಣ ದಿಂದ ವಂಚಿತರಾಗಲು ಸಾಧ್ಯವಿಲ್ಲ, ಇದಕ್ಕೆ ನಮ್ಮ ಶಾಲೆಯ ದಾಖಲಾತಿ ಹಾಜರಾತಿಯೇ ಸಾಕ್ಷಿಯಾಗಿದೆ. ಕಂಠಪಾಠ ವಿಧಾನದಿಂದ ಮುಕ್ತಗೊಳಿಸಿ ಶಿಸ್ತು ಮತ್ತು ಸಮಾಜದಲ್ಲಿ ತಮ್ಮ ಉತ್ತಮ ಜೀವನ ರೂಪಿಸಿಕೊಳ್ಳುವಲ್ಲಿ ನಲಿ ಕಲಿ ಒಂದು ಉತ್ತಮ ವಿಧಾನವಾಗಿದೆ.
















Samsung Dual Camera


Samsung Dual Camera


Samsung Dual Camera


Samsung Dual Camera




Samsung Dual Camera


Samsung Dual Camera